ಮುಕ್ತ ವಿಶ್ವವಿದ್ಯಾಲಯದಲ್ಲಿ ಮುಂಬಡ್ತಿ ನೇಮಕಾತಿ ವಿಳಂಬ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 85 (236)

ಸದಸ್ಯರ ಹೆಸರು : ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು)

ಉತ್ತರಿಸುವ ಸಚಿವರು : ಡಾ. ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆಗಳು:

ಅ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳ ವೃಂದಗಳಾದ ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆಗಳ ಗುಮಾಸ್ತರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವಂತಹ ಹುದ್ದೆಗಳಾಗಿರುವುದು ನಿಜವೇ;

ಆ) ಸದರಿ ಹುದ್ದೆಗಳಿಗೆ ಇತ್ತೀಚೆಗೆ ವಿಶ್ವವಿದ್ಯಾಲಯದಲ್ಲಿ ಮುಂಬಡ್ತಿ ಪ್ರಕ್ರಿಯೆ ನಡೆದಿದೆಯೇ; ಯಾವಾಗ ಮುಂಬಡ್ತಿ ನೀಡಲಾಗಿರುತ್ತದೆ; ಇದಕ್ಕೆ ಅನುಸರಿಸಿದ ನೇಮಕಾತಿ ಮಾನದಂಡಗಳೇನು; ಇದರಲ್ಲಿ ಮೀಸಲಾತಿ ರೋಸ್ಟರ್ ಅನುಪಾತವನ್ನು ಕಡೆಗಣಿಸಲಾಗಿದೆಯೇ (ವಿವರ ನೀಡುವುದು);

ಇ) ಈ ಪೈಕಿ ಎಷ್ಟು ಸಿಬ್ಬಂದಿಗಳಿಗೆ ಯಾವ ಹುದ್ದೆಯಿಂದ ನಂತರದ ಮುಂಬಡ್ತಿ ಹುದ್ದೆಗೆ ಬಡ್ತಿ ನೀಡಲಾಗಿದೆ. (ಹೆಸರು ಮತ್ತು ವಿವರ ಒದಗಿಸುವುದು); ಇದೇ ಪ್ರಕ್ರಿಯೆಯಡಿ ಇನ್ನೂ ಬಡ್ತಿಗೆ ಬಾಕಿ ಇರುವ ಸಿಬ್ಬಂದಿಗಳೆಷ್ಟು? (ಹೆಸರು ವಿವರ ನೀಡುವುದು);

ಈ) ಪ್ರಥಮ ದರ್ಜೆ ಗುಮಾಸ್ತರಿಂದ ಹಿರಿಯ ಸಹಾಯಕರು ಮತ್ತು ಹಿರಿಯ ಸಹಾಯಕರಿಂದ ಸೂಪರಿಂಟೆಂಡೆಂಟ್ ಹಾಗೂ ಸೂಪರಿಂಟೆಂಡೆಂಟ್‌ಗಳಿಂದ ಸಹಾಯಕ ರಿಜಿಸ್ಟ್ರಾರ್ ಹುದ್ದೆಗೆ ಮುಂಬಡ್ತಿ ನೀಡಿದಂತಹ ಸಂದರ್ಭದಲ್ಲಿ ತೆರವಾಗಿರುವ ಹುದ್ದೆಗಳಿಗೆ ಸೇವಾ ಜೇಪ್ಠತೆಯನುಸಾರ ನಿರೀಕ್ಷೆಯಲ್ಲಿರುವವರನ್ನು ನೇಮಕಾತಿಗೊಳಿಸದೇ ವಿಳಂಬ ನೀತಿ ಅನುಸರಿಸಲು ಕಾರಣಗಳೇನು;

ಉ) ಖಾಲಿ ಇರುವಂತಹ ಈ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗುತ್ತದೆ; ಯಾವಾಗ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ? (ವಿವರ ಒದಗಿಸುವುದು)

ಉತ್ತರಗಳು:

ಅ) ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳನ್ನು ಶೇಕಡ 50:50 ಅನುಪಾತದಲ್ಲಿ ಕ್ರಮವಾಗಿ ನೇರ ನೇಮಕಾತಿಗೆ ಹಾಗೂ ದ್ವಿತೀಯ ದರ್ಜೆ ಗುಮಾಸ್ತ/ಡಾಟಾ ಎಂಟ್ರಿ ಆಪರೇಟರ್ಸ್‌ಗಳಿಗೆ ಪದೋನ್ನತಿಗಾಗಿ ಮೀಸಲಾಗಿರುತ್ತದೆ. ಹಾಗೆಯೇ ದ್ವಿ.ದ.ಗು ಹುದ್ದೆಗೂ ಶೇ.75:25ರ ಅನುಪಾತದಲ್ಲಿ ಕ್ರಮವಾಗಿ ನೇರ ನೇಮಕಾತಿಗೆ ಹಾಗೂ ಪದೋನ್ನತಿಗೆ ಮೀಸಲಿರಿಸಲಾಗಿರುತ್ತದೆ.

ಆ) ಈ ಹುದ್ದೆಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ರಚಿಸಿಕೊಂಡಿರುವ ವ್ಯಂದ ಮತ್ತು ನೇಮಕಾತಿ ನಿಯಮಗಳ ಪರಿನಿಯಮದ ಪ್ರಕಾರ ದಿನಾಂಕ 10.08.2011ರಲ್ಲಿ ಖಾಲಿಯಿದ್ದ ಹುದ್ದೆಗಳಿಗೆ ಕ್ರಮವಾಗಿ ಪ್ರಥಮ ದರ್ಜೆ ಗುಮಾಸ್ತ ಹುದ್ದೆ 31 ಮಂದಿಗೆ, ದ್ವಿ.ದ.ಗು ಹುದ್ದೆಗೆ–10 ಮಂದಿಗೆ ಇದಲ್ಲದೇ ಉಕುಸ ಹುದ್ದೆಗೆ ಒಬ್ಬರಿಗೆ, ಸುಕಸ ಹುದ್ದೆಗೆ–12 ಮಂದಿಗೆ, ಅಧೀಕ್ಷಕ ಹುದ್ದೆ ಒಬ್ಬರಿಗೆ, ಹಿರಿಯ ಸಹಾಯಕ ಹುದ್ದೆಗೆ–16 ಮಂದಿಗೆ ಪದೋನ್ನತಿ ನೀಡಲಾಗಿರುತ್ತದೆ; ಹಾಗೂ ದಿನಾಂಕ 18.01.2012ರಲ್ಲಿ ಖಾಲಿಯಾಗಿದ್ದ ದ್ವಿ.ದ.ಗು ಹುದ್ದೆಗೆ 23 ಮಂದಿಗೆ ಇದಲ್ಲದೆ ಉಕುಸ ಹುದ್ದೆಗೆ – ಒಬ್ಬರಿಗೆ, ಶೀಘ್ರಲಿಪಿಗಾರರ ಹುದ್ದೆಗೆ 03 ಮಂದಿ ಟಿ.ಸಿ.ಎ/ಡಿ.ಇ.ಓ.ಗಳಿಗೆ ಪದೋನ್ನತಿಗೆ ಚಾಲ್ತಿಯಲ್ಲಿರುವ ಸರ್ಕಾರದ ಮೀಸಲಾತಿ ನಿಯಮಗಳನ್ವಯ ಅರ್ಹ ಅಭ್ಯರ್ಥಿಗಳಿಗೆ ಪದೋನ್ನತಿ ನೀಡಲಾಗಿ, ಮೀಸಲಾತಿ ರೋಸ್ಟರ್ ಅನುಪಾತವನ್ನು ಎಲ್ಲೂ ಕಡೆಗಣಿಸಿರುವುದಿಲ್ಲ.

ಇ) ಪ್ರಥಮ ದರ್ಜೆ ಗುಮಾಸ್ತ ಹುದ್ದೆಗೆ–ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯಿಂದ – 25 ಮಂದಿ ಹಾಗೂ ಡೇಟಾ ಎಂಟ್ರಿ ಆಪರೇಟರ್ಸ್

ಹುದ್ದೆಯಿಂದ 08 ಮಂದಿ ನೌಕರರುಗಳನ್ನು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಪರಿಹಾರಕ ಹುದ್ದೆಯಿಂದ 10–18 ಮಂದಿ ಮತ್ತು ನಾಲ್ಕನೇ ದರ್ಜೆಯ ಇತರೆ ವರ್ಗಗಳಿಂದ 14 ಮಂದಿಗೆ ಪದೋನ್ನತಿ ನೀಡಲಾಗಿರುತ್ತದೆ. (ವಿವರವನ್ನು ಅನುಬಂಧ–ಅ ನಲ್ಲಿ ಲಗತ್ತಿಸಿದೆ.

ಈ) ಪ್ರಥಮ ದರ್ಜೆ ಗುಮಾಸ್ತ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆಗೂ, ಹಿರಿಯ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೂ, ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆಗೆ ಸೇವಾ ಜೇಷ್ಠತೆಯನ್ವಯವೇ ಖಾಲಿಯಿರುವ ಹುದ್ದೆಗಳ ಲಭ್ಯತೆಯನುಸಾರ ಮೀಸಲಾತಿ ನಿಯಮಗಳನ್ವಯ ಪದೋನ್ನತಿಯನ್ನು ನೀಡುತ್ತಾ ಬರಲಾಗಿರುತ್ತದೆ.

ವಿಳಂಬ ನೀತಿ ಅನುಸರಿಸಿರುವುದಿಲ್ಲ.

ಉ) ಖಾಲಿ ಇರುವ ಪದೋನ್ನತಿ ಹುದ್ದೆಗಳಿಗೆ ಇತ್ತೀಚೆಗೆ ದಿನಾಂಕ 23.01.2012ರಲ್ಲಿ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯನ್ನು ಆಯೋಜಿಸಿ ನೌಕರರುಗಳ ಸೇವಾ ವಿವರಗಳನ್ನು ಪರಿಶೀಲಿಸಿ ಅರ್ಹ ನೌಕರರುಗಳಿಗೆ ಖಾಲಿ ಇರುವ ಹುದ್ದೆಗಳಿಗನುಸಾರವಾಗಿ ಪದೋನ್ನತಿ ನೀಡಲು ಕ್ರಮ ವಹಿಸಲಾಗಿದ್ದು, ಇವರುಗಳ ಪದೋನ್ನತಿಯಿಂದ ತೆರವಾಗುವ ಹುದ್ದೆಗಳಿಗೆ ಸದ್ಯದಲ್ಲಿಯೇ ಕ್ರಮವಹಿಸಲಾಗುವುದೆಂದು ತಿಳಿಸುತ್ತಾ, ಮುಂದೆಯೂ ಉದ್ಭವಿಸುವ ಖಾಲಿ ಹುದ್ದೆಗಳಿಗೆ ಆಯಾ ಅಭ್ಯರ್ಥಿಗಳು ಅರ್ಹತೆ ಪಡೆಯುವುದನ್ನು ಆಧರಿಸಿ ಪದೋನ್ನತಿ ನೀಡಲು ಕ್ರಮವಹಿಸಲಾಗುವುದು.